ಪ್ರಕಟಣೆ : ೧೦

# ಲಂಬಾಣಿ ಲಕ್ಕಿ

ಕಾದಂಬರಿ

ಲೇಖಕಿ :
ಜಗತ್ಪ್ರಿಯದರ್ಶಿನಿ

ಪ್ರಕಾಶಕರು :
ರಾಜಕಮಲ ಪ್ರಕಾಶನ
ನಂ. ೧, ಹೂವಾಡಿಗರ ಗಲ್ಲಿ, ಬಳೇಪೇಟೆ,
ಬೆಂಗಳೂರು-೫೬೦೦೫೩.

ಈ ಮಾಲೆಯ ಸಂಪಾದಕರು ಮತ್ತು ಪ್ರಕಾಶಕರು.

ಜಿ. ಸಿದ್ಧರಾಜ್

ರಾಜಕಮಲ ಪ್ರಕಾಶನ

ಎಲ್ಲಾ ಹಕ್ಕುಗಳು ಲೇಖಕಿಯವರದು.

ಮೊದಲ ಮುದ್ರಣ : ಜನವರಿ ೧೯೭೭

ಮುಖ ಚಿತ್ರ ರಚನೆ : 'ವಿಲಿಯಂ'

ಬೆಲೆ 6-00 ರೂಪಾಯಿಗಳು

ಮುದ್ರಣ :

ಶ್ರೀ ಧನಲಕ್ಷ್ಮೀ ಪ್ರಿಂಟರ್ಸ್,

ಕೆಂಪಾಪುರ ಅಗ್ರಹಾರ, ಬೆಂಗಳೂರು-೫೩.

# ನನ್ನ ಬಿನ್ನಹ

ಏನೇನೋ ಕಲ್ಪನೆ. ಮನಸಲ್ಲಿ ಮೂಡಿದುದನ್ನು ಮನ ಮುಟ್ಟುವಂತೆ ಬರೆಯಬೇಕೆಂಬ ಆಸೆ, ಲೇಖನಿಯಿಂದ ದೇಶಸೇವೆ ಮಾಡಬೇಕೆಂಬ ಹಂಬಲ, ಸಮಾಜದ ರೀತಿ-ನೀತಿಗಳನ್ನು ಎತ್ತಿ ಹಿಡಿದು "ಖಡ್ಗವೂ ಮಾಡಲಾರದ ಕೆಲಸ ಲೇಖನಿ ಮಾಡಬಲ್ಲದು" ಎಂಬ ಮಾತನ್ನು ಕೂಗಿ ತೋರಿಸಬೇಕೆಂಬ ಅದಕ್ಕಾಗಿ ಇಡೀ ಜೀವನವನ್ನು ಬರೆಯಲು ಮುಡುಪಾಗಿಡಬೇಕೆಂಬ ಬಯಕೆ.

ಇವೆಲ್ಲಾ ತುಮುಲಗಳು ಮನಸ್ಸಿನಲ್ಲಿ ತರಂಗಗಳನ್ನೆಬ್ಬಿಸಿ ಮೂಡಿಬಂದ ಭಾವನೆಗಳನ್ನು ಕೃತಿಗೆ ಇಳಿಸಿ, ರಚಿಸಿದ ಕೃತಿಯನ್ನು ನಮ್ಮ ವಾಚಕ ಬಂಧುಗಳ ಕೈಯಲ್ಲಿಟ್ಟು, ಅವರು ಓದಿ, ನಮ್ಮ ಭಾವನೆಗಳನ್ನು ತಾವೂ ಹಂಚಿಕೊಂಡು ಸಹೃದಯದಿಂದ ಮೆಚ್ಚಿದರೆ ಸಾಕು "ನಮ್ಮ ಕೃತಿ ಸಾರ್ಥಕವಾಯಿತು" ಎಂದುಕೊಳ್ಳುವ ಆಶಾಗೋಪುರವು ಒಡೆದು ಚೂರು-ಪುಡಿಯಾಗುವುದು ಯಾವಾಗ ತ್ತೀ ?......

"ಬರೆದ ಕೃತಿಯನ್ನು ಸ್ವಂತ ಪ್ರಕಟಿಸಲು ಶಕ್ತಿಯಿಲ್ಲದೇ ಪ್ರಕಾಶಕರ ಮನೆ, ಬೀದಿ-ಬೀದಿ ಅಲೆದು ನಿರಾಶರಾದಾಗ, ಈ ಬರೆಯುವ ಹುಚ್ಚು ಬೇಕಿತ್ತಾ ! ದೇವರೇ ? ಅಸ್ತು ಸುತ್ತಿ, ಇದು ಲೇಖಕರಿಗೆ ಸಾವಿರಾರ ಬವಣೆ" ಎನ್ನುವುದು ನನಗೂ ಅರಿವಾಯಿತು.

ಈ ನನ್ನ ಕಾದಂಬರಿ ಪ್ರಕಟವಾಗಿದ್ದರೆ ೫ ವರ್ಷದ ಹಿಂದೆಯೇ ಪ್ರಕಟವಾಗಿತ್ತು. ಇದೇ ಇಂತಹ ತಂಗು ತೊಂದರೆಗಳಿಂದ ಕತ್ತಲೆಯಲ್ಲೇ ಕೊಳೆಯಬೇಕಾಯಿತು. ಪ್ರಕಾಶನ ಸಂಸ್ಥೆಗಳನ್ನು ಕೇಳಿದರೆ "ನೀವ್ಯಾವ ಪ್ರಸಿದ್ಧರಾಂತ ಲೇಖಕರೇ ? ಹಾಗಿದ್ದರೆ ನಿಮ್ಮ ಕೃತಿಯನ್ನು ಪ್ರಕಟಿಸುತ್ತೇವೆ" ಎನ್ನುತ್ತಾರೆ. ಅದರೆ ಪ್ರಕಟವಾದ ನಂತರ ತಾನೆ ಹೆಸರು ಉಳಿಯುತ್ತದೆಯೋ ? ಅಳಿಯುತ್ತದೆಯೋ ? ತಿಳಿಯಬೇಕಾದರೆ ...

ಓದುಗರೇ ಲೇಖಕರ ಒರೆಗಲ್ಲು. ಅವರ ಪ್ರೋತ್ಸಾಹವೇ ಬರೆಯುವವರಿಗೆ ಸ್ಫೂರ್ತಿ-ನವಚೇತನ, ಅವರ ಆದರದ ಸ್ವಾಗತಕ್ಕೆ ಕವಿ ತನ್ನ ಜೀವಿತವನ್ನೇ ಮುಡುಪಾಗಿ ಇಡಬಲ್ಲ.

ಅವರೆ ಬರೆದದನ್ನು ಓದುಗರ ಕೈ ಸೇರುವಂತೆ ಮಾಡಲು ಬರದ.ನನಗೆ ಬರದ ಭಗವಂತನಿಗೇ ಪ್ರೀತಿ.

ಈ "ಲಂಬಾಣಿ ಲಕ್ಷ್ಮಿ" ನನ್ನ ಮೊದಲ ಕಾದಂಬರಿ. ಇದನ್ನು ಪ್ರಕಟಿಸಬೇಕೆಂಬ ಹಂಬಲವಂತೂ ನನ್ನ ಮನಸ್ಸನ್ನು ಕೊರೆಯುತ್ತಿತ್ತು. ಪ್ರಕಟಿಸಲು ಶಕ್ತಿ ಸಾಲದೆ ಕೊರಗುತ್ತಿದ್ದೆ. ಅದೇ ಸಮಯಕ್ಕೆ "ಯಾರ ಬೀಳದವರು ?" ಖ್ಯಾತಿಯ ಶ್ರೀಮಾನ್ "ಜಿ. ಸಿದ್ಧರಾಜ್"ರವರು ನನ್ನ ನೆರವಿಗೆ ಬಂದು ಇದನ್ನು ಪ್ರಕಟಿಸುವಂತಾಗಿ ಘಟನೆ ಇತ್ತು.

ಅವರ "ರಾಜಕಮಲ ಪ್ರಕಾಶನ" ಮಾಲೆಯು ಅನೇಕ ಹೊಸ ಲೇಖಕ-ಲೇಖಕಿಯರ ಕೃತಿಗಳನ್ನು ಬೆಳಕಿಗೆ ತಂದಿರುವುದಲ್ಲದೆ ಕೆಲವು ಒಳ್ಳೆಯ ಗ್ರಂಥಗಳನ್ನು ಪ್ರಕಟಿಸುವ ಸಾಹಸ ಮಾಡಿರುವುದು ಪ್ರಶಂಸನೀಯ. ಅವರ ಮಾಲೆಯಲ್ಲಿ ನನ್ನದೂ ಒಂದು ಕುಸುಮವನ್ನು ಸೇರಿಸಿದ್ದಕ್ಕಾಗಿ ಶ್ರೀಮಾನ್ ಜಿ. ಸಿದ್ಧರಾಜ್‌ರವರಿಗೆ ನಾನು ತುಂಬಾ ಕೃತಜ್ಞಳು.

ಕಥೆಗೆ ತಕ್ಕ ಕಣ್ಸೆಳೆವಂತೆ ಮುಖ ಪುಟದ ಚಿತ್ರವನ್ನು ಬರೆದು ಕೊಟ್ಟ 'ವಿಲಿಯಮ್'ರವರಿಗೆ ಧನ್ಯವಾದಗಳು. ಅಂದವಾಗಿ ಮುದ್ರಣ ಮಾಡಿಕೊಟ್ಟ ಶ್ರೀ ಧನಲಕ್ಷ್ಮೀ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀಮಾನ್ ಜಿ. ಆರ್. ಸತ್ಯನಾರಾಯಣರಾವ್‌ರವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

"ಲಂಬಾಣಿ ಲಕ್ಷ್ಮಿ" ನನ್ನ ಕಲ್ಪನೆಯ ಕಾದಂಬರಿ. ಸಮಾಜದಲ್ಲಿ ಹೆಣ್ಣಿಗೆ ಗಾಣದಾಳಿಗೆಯ ಕಟು-ಕಟ್ಟಲೆಯ ತೊಡಕಿದೆ. ಆ ತೊಡಕುಗಳನ್ನು ಸಹಿಸಲಾರದೇ ಯಾವುದೇ ಹೆಣ್ಣು ಸ್ವಲ್ಪ ಎತ್ತರದ ಜೀವನವಿಡೀ ಪರಿತಪಿಸುತ್ತಾಳೆ. ನನ್ನ ನೀತಿಯಲ್ಲಿ ಕೆಡುಕು ತೊಲಗಿಸುವಂತಹ ಆ ಮಂಗಳೆಯ ಪಾತ್ರವನ್ನು ಕಾದಂಬರಿಗೆ ನಾಗಿಟ್ಟುಕೊಂಡು ರಚಿಸಿರುತ್ತೇನೆ.

ನನ್ನ ಮನದ ಅಂತರಂಗದ ಅರಿವಿನ ಸೀಮಿತಕ್ಕೆ ಒಳಗಾಗಿ ಕೆಳಮಳಿಸುವ ಸ್ವಭಾವಿಕತೆಯನ್ನು ಮಂಗಳೆಯಲ್ಲಿ ಚಿತ್ರಿಸಲು ಪ್ರಯತ್ನಿಸಿರುತ್ತೇನೆ. ಮುಖ್ಯ ಪಾತ್ರಗಳು ಅವನ್ನು ಪೋಷಕ, ಇದು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆಯೋ ಅರಿಯೆ.

ವಾಚಕರು ಓದಿ ತಮ್ಮ ಅಭಿಪ್ರಾಯವನ್ನು ಬಿಚ್ಚು ಮನಸ್ಸಿನಿಂದ ನನಗೆ ತಿಳಿಸಬೇಕಾಗಿ ವಿನಂತಿ. ನಿಮ್ಮ ಪತ್ರಗಳಿಗೆ ಆಹ್ವಾನವಿದೆ.

೧-೧-೧೯೭೭

"ಜಗನ್ನಿತ್ಯಸುಹಾಸಿನಿ"

ಜಗ್ಗು ಸಿಂಗ್ರಯ್ಯಂಗಾರ್
ಸೋಮೇಶ್ವರ ಎಕ್ಸ್‌ಟೆನ್ಷನ್, ತುಮಕೂರು